# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

**ವಿಶೇಷ ರಾಜ್ಯ ಪತ್ರಿಕೆ**

| ಭಾಗ – ೩<br>Part – III | ಬೆಂಗಳೂರು, ಶನಿವಾರ, ೧೭, ಜನವರಿ, ೨೦೨೬(ಪುಷ್ಯ, ೨೭, ಶಕವರ್ಷ, ೧೯೪೭)<br>BENGALURU, SATURDAY, 17, JANUARY, 2026(PUSHYA , 27, SHAKAVARSHA, 1947) | ನಂ. ೭೮<br>No. 78 |
|---|---|---|



**ಕರ್ನಾಟಕ ಸರ್ಕಾರ**

**ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗ**

**ನಂ.204, 2ನೇ ಮಹಡಿ, 3ನೇ ಗೇಟ್,**
**ಬಹುಮಹಡಿಗಳ ಕಟ್ಟಡ,**
**ಬೆಂಗಳೂರು-560001**


---

ಸಂಖ್ಯೆ: ಕಪಂರಾಸೀನಿಆ/86/ಪ್ರಾ.ಗ.ನಿ/2023 ದಿನಾಂಕ:17-01-2026

## <u>ಪ್ರಕಟಣೆ</u>

**ಬೀದರ್ ಜಿಲ್ಲೆಯ ಬಸವಕಲ್ಯಾಣ ತಾಲ್ಲೂಕಿನ ಜಿಲ್ಲಾ ಪಂಚಾಯತಿ ಚುನಾಯಿತ ಸದಸ್ಯರ ಸಂಖ್ಯೆ ನಿಗದಿ ಹಾಗೂ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ಸೀಮಾ/ಗಡಿ ನಿರ್ಣಯ ಕುರಿತು.**

ನಗರಾಭಿವೃದ್ಧಿ ಇಲಾಖೆಯು, ಬೀದರ್ ಜಿಲ್ಲೆಯ, ಬಸವಕಲ್ಯಾಣ ತಾಲ್ಲೂಕಿನ ಕೆಲವು ಗ್ರಾಮೀಣ ಪ್ರದೇಶಗಳನ್ನು ನಗರ ಸಂಸ್ಥೆಗಳನ್ನಾಗಿ ಪರಿವರ್ತಿಸಿ ಅಧಿಸೂಚನೆಯನ್ನು ಹೊರಡಿಸಿರುತ್ತದೆ. ಈ ಹಿನ್ನೆಲೆಯಲ್ಲಿ, ಈಗಾಗಲೇ ದಿನಾಂಕ:16-12-2023ರಲ್ಲಿ ಅಧಿಸೂಚಿಸಿ ಹೊರಡಿಸಿರುವ ಬಸವಕಲ್ಯಾಣ ತಾಲ್ಲೂಕಿನ ಜಿಲ್ಲಾ ಪಂಚಾಯಿತಿ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ವ್ಯಾಪ್ತಿಯಿಂದ ಪರಿವರ್ತನೆಗೊಂಡಿರುವ ಗ್ರಾಮೀಣ ಪ್ರದೇಶಗಳನ್ನು ಕೈಬಿಡಬೇಕಾಗಿರುತ್ತದೆ. ಆದ್ದರಿಂದ, ಸರ್ಕಾರವು, ದಿನಾಂಕ:06-01-2026 ರ ಕರ್ನಾಟಕ ರಾಜ್ಯ ಪತ್ರದಲ್ಲಿ ಬಸವಕಲ್ಯಾಣ ತಾಲ್ಲೂಕಿನ ಚುನಾಯಿತ ಸದಸ್ಯರ ಸಂಖ್ಯೆ ಹಾಗೂ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ಸೀಮಾ/ಗಡಿ ನಿರ್ಣಯವನ್ನು ಹಿಂಪಡೆದಿರುತ್ತದೆ. ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗವು ಬಸವಕಲ್ಯಾಣ ತಾಲ್ಲೂಕಿನ ಪರಿಷ್ಕೃತ ಸದಸ್ಯರ ಸಂಖ್ಯೆಯನ್ನು ಹಾಗೂ ಸೀಮಾ/ಗಡಿಗಳನ್ನು ನಿಯಮಾನುಸಾರ ರಚಿಸಬೇಕಾಗಿರುತ್ತದೆ.

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 160, 161 ಮತ್ತು 163ರ ಅನ್ವಯ ಹಾಗೂ 308 (ಎಫ್)ರ ಪ್ರಕರಣದಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ , ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗವು ಬೀದರ ಜಿಲ್ಲೆಯ, ಬಸವಕಲ್ಯಾಣ ತಾಲ್ಲೂಕಿನ **ಜಿಲ್ಲಾ ಪಂಚಾಯತಿ** ಚುನಾಯಿತ ಸದಸ್ಯರ ಸಂಖ್ಯೆಯನ್ನು ಕೋಷ್ಟಕ **'ಅ'** ದಲ್ಲಿರುವಂತೆ ನಿಗದಿಪಡಿಸಿದೆ. '**ಅ**' ಕೋಷ್ಟಕದ **2ನೇ** ಅಂಕಣದಲ್ಲಿರುವ ತಾಲ್ಲೂಕಿನಿಂದ ಆಯ್ಕೆಯಾಗುವ ಜಿಲ್ಲಾ ಪಂಚಾಯತಿ ಸದಸ್ಯರುಗಳ ಸಂಖ್ಯೆಯನ್ನು **3ನೇ** ಅಂಕಣದಲ್ಲಿ ನಿಗದಿಪಡಿಸಿದೆ.

ಬೀದರ ಜಿಲ್ಲೆಯ, ಬಸವಕಲ್ಯಾಣ ತಾಲ್ಲೂಕಿನ ಜಿಲ್ಲಾ ಪಂಚಾಯತಿ ವ್ಯಾಪ್ತಿಯೊಳಗಿರುವ ಪ್ರದೇಶಗಳನ್ನು **6** ಏಕ ಸದಸ್ಯ ಜಿಲ್ಲಾ ಪಂಚಾಯಿತಿ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳನ್ನಾಗಿ ವಿಂಗಡಿಸಿ ಅವುಗಳ ಸೀಮಾ/ಗಡಿಯನ್ನು ಕೋಷ್ಟಕ **'ಆ'** ದಲ್ಲಿರುವಂತೆ ನಿರ್ಣಯಿಸಿದೆ. **ಆ**' ಕೋಷ್ಟಕದ **3ನೇ** ಅಂಕಣದಲ್ಲಿ ಪ್ರತಿಯೊಂದು ಜಿಲ್ಲಾ ಪಂಚಾಯತ್ ಪ್ರಾದೇಶಿಕ ಚುನಾವಣಾ ಕ್ಷೇತ್ರದ ಸಂಖ್ಯೆ ಹಾಗೂ ಹೆಸರನ್ನು ಮತ್ತು ಕೋಷ್ಟಕದ **4ನೇ** ಅಂಕಣದಲ್ಲಿ ನಮೂದಿಸಿರುವ ಗ್ರಾಮಗಳನ್ನೊಳಗೊಂಡ ಪ್ರದೇಶವನ್ನು ಆ ಪ್ರಾದೇಶಿಕ ಚುನಾವಣಾ ಕ್ಷೇತ್ರದ ವ್ಯಾಪ್ತಿಯೆಂದು ನಿಗದಿಪಡಿಸಿದೆ.

ಬೀದರ್ ಜಿಲ್ಲೆಯ, ಬಸವಕಲ್ಯಾಣ ತಾಲ್ಲೂಕಿನ ಜಿಲ್ಲಾ ಪಂಚಾಯತಿ ಚುನಾಯಿತ ಸದಸ್ಯರ ಸಂಖ್ಯೆ ಹಾಗೂ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ವ್ಯಾಪ್ತಿಗೆ ಸಂಬಂಧಿಸಿದಂತೆ ಆಕ್ಷೇಪಣೆಗಳಿದ್ದಲ್ಲಿ, ಪ್ರಕಟಣೆಯ ದಿನಾಂಕದಿಂದ **7 (ಏಳು) ದಿವಸಗಳ ಒಳಗಾಗಿ ಅಂದರೆ ದಿನಾಂಕ:23-01-2026 ಸಂಜೆ 5.00 ಗಂಟೆಯ ಒಳಗೆ** ಸಲ್ಲಿಸಲು ತಿಳಿಸಿದೆ. ಆಕ್ಷೇಪಣೆಗಳನ್ನು ಆನ್‌ಲೈನ್ ಮೂಲಕ ಹಾಗೂ ಖುದ್ದಾಗಿ/ಅಂಚೆಯ ಮೂಲಕ ಈ ಕೆಳಕಂಡ ವಿಳಾಸಕ್ಕೆ ಸಲ್ಲಿಸತಕ್ಕದ್ದು. ಅಂಚೆಯ ಮೂಲಕ ಸಲ್ಲಿಸಿದಾಗಲೂ, ಆಯೋಗವು ನಮೂದಿಸಿದ ದಿನಾಂಕದೊಳಗೆ ಸಲ್ಲಿಸತಕ್ಕದ್ದು. ನಂತರ ಸ್ವೀಕೃತವಾದ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ ಹಾಗೂ ಅಂಚೆ ಇಲಾಖೆಯ ವಿಳಂಬಕ್ಕೆ ಆಯೋಗವು ಜವಾಬ್ದಾರರಾಗಿರುವುದಿಲ್ಲ ಎಂದು ಈ ಮೂಲಕ ತಿಳಿಸಿದೆ.

**(ಅ) ಆನ್ ಲೈನ್ ಮೂಲಕ:**

**ವೆಬ್ ಸೈಟ್ ವಿಳಾಸ: "https://rdpr.karnataka.gov.in/rdc/public/"** ಸದರಿ ವೆಬ್‌ಸೈಟ್ ನ ಮುಖಪುಟದ ಎಡಭಾಗದಲ್ಲಿರುವ ಸಾರ್ವಜನಿಕ ಸಲಹೆಗಳು ಎಂಬ ಶೀರ್ಷಿಕೆಯನ್ನು CLICK ಮಾಡಿ ತಮ್ಮ ಆಕ್ಷೇಪಣೆಗಳನ್ನು ಆನ್‌ಲೈನ್ ನಲ್ಲಿ ಸಲ್ಲಿಸಬಹುದು.

**(ಆ) ಖುದ್ದಾಗಿ/ಅಂಚೆ ಮೂಲಕ:**

ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗ.
3ನೇ ಗೇಟ್, 2ನೇ ಮಹಡಿ, ಕೊಠಡಿ ಸಂಖ್ಯೆ: 222/A, ಬಹುಮಹಡಿ ಕಟ್ಟಡ,
ಅಂಬೇಡ್ಕರ್ ವೀಧಿ, ಬೆಂಗಳೂರು-560001.

**ಕೋಷ್ಟಕ "ಅ"**

| ಬೀದರ ಜಿಲ್ಲೆ | | |
|---|---|---|
| ಕ್ರ. ಸಂ. | ತಾಲ್ಲೂಕಿನ ಹೆಸರು | ಜಿಲ್ಲಾ ಪಂಚಾಯತಿಯ ಸದಸ್ಯರ ಸಂಖ್ಯೆ |
| 1 | 2 | 3 |
| | ಬಸವಕಲ್ಯಾಣ | 6 |

**ಕೋಷ್ಟಕ "ಆ"**

| ಬೀದರ ಜಿಲ್ಲೆ | | | |
|---|---|---|---|
| ಕ್ರ ಸಂ | ತಾಲ್ಲೂಕಿನ ಹೆಸರು | ಜಿಲ್ಲಾ ಪಂಚಾಯತಿ ಪ್ರಾದೇಶಿಕ ಚುನಾವಣಾ ಕ್ಷೇತ್ರದ ಸಂಖ್ಯೆ ಮತ್ತು ಹೆಸರು | ಜಿಲ್ಲಾ ಪಂಚಾಯತಿ ಪ್ರಾದೇಶಿಕ ಚುನಾವಣಾ ಕ್ಷೇತ್ರದ ವ್ಯಾಪ್ತಿಯಲ್ಲಿನ ಗ್ರಾಮಗಳ ಹೆಸರು |
| 1 | 2 | 3 | 4 |
| 1 | ಬಸವಕಲ್ಯಾಣ | 23-ಪರತಾಪೂರ | ಚಂಡಕಾಪೂರ, ಘೋಟಾಳ, ಬಂಡಗರ ವಾಡಿ, ಬೇಡರವಾಡಿ, ಜಾಜನಮುಗಳಿ, ಮನ್ನಳ್ಳಿ, ಮೋರಖಂಡಿ, ಮೋರಖಂಡಿ ವಾಡಿ, ಚೌಕಿವಾಡಿ, ಉಮಾಪೂರ, ರಾಮತೀರ್ಥ (ಕೆ), ಹಳ್ಳಿ, ಲಾಹೇಶ್ವರ, ಪರತಾಪೂರ, ನೀಲಕಂಠ, ನೀಲಕಂಠ ವಾಡಿ, ಖಾನಾಪೂರ (ಕೆ), ಖಾನಾಪೂರ (ಕೆ)ವಾಡಿ, ತಳಭೋಗ. |
| 2 | ಬಸವಕಲ್ಯಾಣ | 24-ನಾರಾಯಣಪೂರ | ಬೇಟಬಾಲಕುಂದಾ, ಖಂಡಾಳ, ಗೌರ, ಧನ್ನೂರಾ (ಕೆ), ಧನ್ನೂರಾ (ಕೆ)ವಾಡಿ, ಜಾನಾಪೂರ, ಯದಲಾಪೂರ, ಕಿಟ್ಟಾ, ಗೋಕುಳ, ನಾರಾಯಣಪೂರ, ಖಂಡಿಕೇರಾ ವಾಡಿ, ಹುಲಗುತ್ತಿ ವಾಡಿ, ಗುಣತೀರ್ಥವಾಡಿ, ನಿರಗುಡಿ, ಧನಗರವಾಡಿ, ದಾಸರವಾಡಿ, ರೋಳಾ, ಕೌಡಿಯಾಳ (ಆರ್), ಶಿವಪೂರ. |
| 3 | ಬಸವಕಲ್ಯಾಣ | 25-ಮಂಠಾಳ | ಮಂಠಾಳ, ಸಸ್ತಾಪೂರ, ಅತಲಾಪೂರ, ಜಾಫರವಾಡಿ, ಇಲ್ಯಾಳ, ಗುಂಡೂರ, ಯರಂಡಿ, ಹಣಮಂತವಾಡಿ, ಬಂದೇನವಾಜ ವಾಡಿ, ಖಾನಾಪೂರ (ಬಿ), ಹಿಪ್ಪರ್ಗಾ ಘಾಟ, ಹಿಪ್ಪರ್ಗಾ ಘಾಟ ತಾಂಡಾ, ಮಿರ್ಜಾಪೂರ, ಅಲಗೂಡ, ಹಂದ್ರಾಳ (ಆರ್), ಚಿಟ್ಟಾ (ಕೆ), ಕಾಂಬಳೆವಾಡಿ, ಉರ್ಕಿ. |

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



| ಬೀದರ ಜಿಲ್ಲೆ | | | |
|---|---|---|---|
| ಕ್ರ ಸಂ | ತಾಲ್ಲೂಕಿನ ಹೆಸರು | ಜಿಲ್ಲಾ ಪಂಚಾಯತಿ ಪ್ರಾದೇಶಿಕ ಚುನಾವಣಾ ಕ್ಷೇತ್ರದ ಸಂಖ್ಯೆ ಮತ್ತು ಹೆಸರು | ಜಿಲ್ಲಾ ಪಂಚಾಯತಿ ಪ್ರಾದೇಶಿಕ ಚುನಾವಣಾ ಕ್ಷೇತ್ರದ ವ್ಯಾಪ್ತಿಯಲ್ಲಿನ ಗ್ರಾಮಗಳ ಹೆಸರು |
| 1 | 2 | 3 | 4 |
| **4** | ಬಸವಕಲ್ಯಾಣ | 26-ಕೋಹಿನೂರ | ಉಜಳಂಬ, ಧಾಮೂರಿ, ಎಕಂಬಾ, ಫುಲಧರ ವಾಡಿ, ಬೇಡರವಾಡಿ (ಯು), ಜೋಗೆವಾಡಿ, ನವಚಂದವಾಡಿ, ಹೊನ್ನಳ್ಳಿ, ಭೋಸ್ಗಾ, ಸಿರೂರಿ, ವಡ್ಡರಗಾ, ಯಲದಗುಂಡಿ, ಮಾನಖೇಡ್, ಲಾಡವಂತಿ, ಗದಲೇಗಾಂವ (ಕೆ), ಭಾಕನಾಳ, ಚಿತ್ತಕೋಟಾ (ಬಿ), ಸಿರಗೂರ, ಗಿಲಿಗಿಲಿ, ಚಿತ್ತಕೋಟಾ (ಕೆ), ರಾಮತೀರ್ಥ(ಡಿ), ಹತ್ತರ್ಗಾ (ಎಸ್), ಕೋಹಿನೂರ, ಕೋಹಿನೂರ ವಾಡಿ, ಕೋಹಿನೂರ ಪಹಾಡ, ಅಟ್ಟೂರ, ಸರಜವಳಗಾ, ಬಟಗೇರಾ, ಬಟಗೇರಾ ವಾಡಿ. |
| **5** | ಬಸವಕಲ್ಯಾಣ | 27-ಮುಡಬಿ | ಹಾರಕೂಡ, ಹಾರಕೂಡ ತಾಂಡಾ, ಸೈದಾಪೂರ, ಗದಲೇಗಾಂವ (ಬಿ), ಸಿರಗಾಪೂರ, ಖೇರ್ಡಾ (ಕೆ), ಮುಡಬಿ, ಮುಡಬಿ ವಾಡಿ, ಕಿಣ್ಣಿ (ಶರಣನಗರ), ಕಿಣ್ಣಿ ವಾಡಿ, ಬಗದೂರಿ, ಎಕಲೂರ, ಎಕಲೂರ ವಾಡಿ, ಮೈಸಲಗಾ, ಹಾಮುನಗರ, ಜನವಾಡಾ, ಯಳವಂತಗಿ, ಹತ್ಯಾಳ, ಕಲಖೋರಾ, ಕಲಖೋರಾ ತಾಂಡಾ, ಖಾರಿಗುಂಡಾ ತಾಂಡಾ, ಹಿಪ್ಪರ್ಗಾ ಬಾಗ, ಚಿಕನಾಗಾಂವ, ಚಿಕನಾಗಾಂವ ವಾಡಿ, ರಾಮನಗರ ತಾಂಡಾ, ಪ್ರೇಮಸಿಂಗ ತಾಂಡಾ. |
| **6** | ಬಸವಕಲ್ಯಾಣ | 28-ರಾಜೋಳಾ | ರಾಜೋಳಾ, ಘೋಗ್ಗಾ, ತಡೋಳಾ, ಹಂದ್ರಾಳ (ಕೆ), ಕೌಡಿಯಾಳ (ಎಸ್), ಯರಬಾಗ, ಇಸ್ಲಾಂಪೂರ, ಲಿಂಗದಳ್ಳಿ, ಸುಂತಾಣ, ಮಂಗಳೂರ, ಹಣಮಂತವಾಡಿ (ಆರ್), ರಾಮಪೂರವಾಡಿ, ಖೇರ್ಡಾ (ಬಿ), ಶಿವರಾಮ ತಾಂಡಾ, ಮಾಶ್ಯಾಳ ತಾಂಡಾ, ಹಿರನಾಗಾಂವ, ಧನ್ನೂರಾ (ಆರ್), ಸದಲಾಪೂರ, ಪಂಡರಗೇರಾ, ಪಂಡರಗೇರಾ ತಾಂಡಾ. |

**ವಿಶೇಷ ಸೂಚನೆ:-**

**ಬೀದರ್ ಜಿಲ್ಲೆಯ ಬಸವಕಲ್ಯಾಣ ತಾಲ್ಲೂಕಿನ ಜಿಲ್ಲಾ ಪಂಚಾಯಿತಿ ಕ್ಷೇತ್ರಗಳ ಚುನಾಯಿತ ಸದಸ್ಯರ ಸಂಖ್ಯೆ ಮತ್ತು ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ಸೀಮಾ/ಗಡಿ ನಿರ್ಣಯ ಕುರಿತಂತೆ, ದಿನಾಂಕ:23-01-2026ರ ಒಳಗಾಗಿ ಸಲ್ಲಿಸಲ್ಪಟ್ಟ ಆಕ್ಷೇಪಣೆ/ಅಹವಾಲುಗಳ ಪರಿಶೀಲನಾ ಅದಾಲತ್ ಅನ್ನು ದಿನಾಂಕ:27-01-2026 ರಂದು ಬೆಳಿಗ್ಗೆ10:30 ರಿಂದ ಮಧ್ಯಾಹ್ನ 1:30 ರವರೆಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಗೇಟ್-ನಂ-2, 2ನೇ ಮಹಡಿ, ಕೊಠಡಿ ಸಂಖ್ಯೆ:229, 230 ಬಹುಮಹಡಿಗಳ ಕಟ್ಟಡ, ಬೆಂಗಳೂರು-560001 ಇಲ್ಲಿ ನಡೆಸಲಾಗುವುದು. ಆಕ್ಷೇಪಣೆ ಮತು ಅಹವಾಲುಗಳನ್ನು ಸಲ್ಲಿಸಿರುವವರು ಅದಾಲತ್ ನಲ್ಲಿ ಭಾಗವಹಿಸಲು ಇಚ್ಛಿಸಿದಲ್ಲಿ, ಸರ್ಕಾರದಿಂದ ನೀಡಿರುವ ಭಾವಚಿತ್ರವುಳ್ಳ ಗುರುತಿನ ಚೀಟಿಯ ಮೂಲ ಪ್ರತಿಯನ್ನು ತಮ್ಮೊಂದಿಗೆ ಕಡ್ಡಾಯವಾಗಿ ತರತಕ್ಕದ್ದು.**

**(ಡಾ||ಎನ್. ನೋಮೇಶ್ ಕುಮಾರ್)**
ನಿರ್ದೇಶಕರು (ಪಂ. ರಾಜ್) ಮತ್ತು
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ
ಹಾಗೂ ಸದಸ್ಯ ಕಾರ್ಯದರ್ಶಿ
ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗ

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH